ಸಾಕ್ಷಿಯನ್ನು ದಿನಾಂಕಃ 12-03-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಃ ಕೆ.ಪಿ.ಕೆ , ವಾದಿ ಪರ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನಾನು ನನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ಡಿಜಿಟಲ್ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ–1 ಎಂದು, ಪೊಲೀಸರು ನೀಡಿದ ಸ್ವೀಕೃತಿಯನ್ನು ನಿಪಿ–2 ಎಂದು, ಪೊಲೀಸರು ನೀಡಿದ ಹಿಂಬರಹವನ್ನು ನಿಪಿ–3 ಎಂದು, ಎರಡು ರಶೀದಿ ನಮೂನೆ–3 ನ್ನು ನಿಪಿ–4 ಮತ್ತು ನಿಪಿ–5 ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಿ ಮುಂದೂಡಲಾಯಿತು.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ(C/C)